**ತರಗತಿ** :10 **ವಿಷಯ** :ಸಮಾಜ ಶಾಸ್ತ್ರ / Social Science **ವಿಧ** :

**ದಿನಾಂಕ** :05/12/2012 ಅಂಕಗಳು/Max Marks:100

---

**1. ಸರಿಯಾದ ಉತ್ತರವನ್ನು ಆರಿಸಿ./ Choose right answers.** 15X1

**1)** [Q_ID:213]. ಜಪಾನ್ ಪರ್ಲ್ ಹಾರ್ಬರ್ ಮೇಲೆ ದಾಳಿ ಮಾಡಿಲ್ಲದಿದ್ದರೆ, ಆಗ :

a) ಅಮೆರಿಕಾ ಅಲಿಪ್ತತೆಯನ್ನು ಅನುಸರಿಸುತ್ತಿತ್ತು b) ಹೆಚ್ಚು ರೀತಿಯ ಹಾನಿ ಸಂಭವಿಸುತ್ತಿರಲಿಲ್ಲ c) ಜರ್ಮನಿಯು ಯುದ್ಧವನ್ನು ಗೆಲ್ಲಬಹುದಿತ್ತು d) ಜಪಾನ್ ಶರಣಾಗತವಾಗುತ್ತಿರಲಿಲ್ಲ

**2)** [Q_ID:634]. ಹಿರೋಷಿಮಾ ಮತ್ತು ನಾಗಾಸಾಕಿಗಳ ಮೇಲೆ ಅಮೇರಿಕ ಬಾಂಬ್ ದಾಳಿ ಮಾಡಿಲ್ಲದಿದ್ದರೆ :

a) ಎರಡನೆ ವಿಶ್ವಸಮರ ನಡೆಯುತ್ತಿರಲಿಲ್ಲ b) ಜಪಾನ್ ಎರಡನೆ ವಿಶ್ವಸಮರಕ್ಕೆ ಪ್ರವೇಶಿಸುತ್ತಿರಲಿಲ್ಲ c) ಜಪಾನ್ ಯಾವುದೇ ಶರತ್ತುಗಳಿಲ್ಲದೆ ಶರಣಾಗುತ್ತಿರಲಿಲ್ಲ d) ಜರ್ಮನಿ ಶರಣಾಗುತ್ತಿರಲಿಲ್ಲ.

**3)** [Q_ID:635]. ಭಾರತದ ಸಂವಿಧಾನದ 93ನೇ ತಿದ್ದುಪಡಿಯ ಪ್ರಕಾರ ಮೂಲಭೂತ ಹಕ್ಕೆಂದು ಸಾರಲ್ಪಟ್ಟಿದ್ದು :

a) ಸಾಂಸ್ಕೃತಿಕ ಹಕ್ಕು b) ಧಾರ್ಮಿಕ ಹಕ್ಕು c) ಸಮಾನತೆಯ ಹಕ್ಕು d) ಶೈಕ್ಷಣಿಕ ಹಕ್ಕು

**4)** [Q_ID:639]. ಮ್ಯಾಂಗ್ರೂವ್ ಕಾಡುಗಳಲ್ಲಿರುವ ಬಿಳಲು ಬೇರುಗಳ ಮರಗಳಿಗೆ ಅತ್ಯುತ್ತಮ ಉದಾಹರಣೆ :

a) ಶ್ರೀಗಂಧ b) ತೇಗ c) ಆಲ d) ಮಾವು

**5)** [Q_ID:642]. ರಾಷ್ಟ್ರೀಯ ಸಣ್ಣ ಕೈಗಾರಿಕಾ ನಿಗಮವನ್ನು ಸ್ಥಾಪಿಸಿದ ಉದ್ದೇಶ :

a) ಸಂಘಟನಾತ್ಮಕ ನೆರವು ನೀಡಲು b) ಹಣಕಾಸಿನ ನೆರವು ನೀಡಲು c) ತಾಂತ್ರಿಕ ನೆರವು ನೀಡಲು d) ಸಂಶೋಧನೆ ಮತ್ತು ತರಬೇತಿ ನೆರವು ನೀಡಲು

**6)** [Q_ID:858]. ಸರಕಾರಿ ಸೇವೆಗಾಗಿ ವ್ಯಕ್ತಿಯ ಯೋಗ್ಯತೆ ಮತ್ತು ಅರ್ಹತೆಗೆ ಅನುಗುಣವಾಗಿ ಕೆಲಸಕ್ಕೆ ನಿಯೋಜಿಸುವಂತೆ ಮಾಡಿದ ಶಾಸನ :

a) 1853ರ ಶಾಸನ b) 1833ರ ಶಾಸನ c) 1935ರ ಶಾಸನ d) ವಾರನ್ಹೇಸ್ಟಿಂಗ್ಸ್

**7)** [Q_ID:871]. ಗೃಹ ಕೈಗಾರಿಕೆಗಳನ್ನು ಹೀಗೂ ಕರೆಯುತ್ತಾರೆ. :

a) ಗುಡಿ ಕೈಗಾರಿಕೆ b) ಬೃಹತ್ ಕೈಗಾರಿಕೆ c) ಮಧ್ಯಮ ಕೈಗಾರಿಕೆ d) ಸಣ್ಣ ಕೈಗಾರಿಕೆ

**8)** [Q_ID:1283]. ಈ ರಾಜ್ಯವು ದೇಶದಲ್ಲಿಯೇ ಅತ್ಯಂತ ಹೆಚ್ಚು ಕಲ್ಲಿದ್ದಲನ್ನು ಉತ್ಪಾದಿಸುತ್ತವೆ. :

a) ಬಿಹಾರ b) ಕರ್ನಾಟಕ c) ಒರಿಸ್ಸಾ d) ಛತ್ತೀಸ್ ಘಡ

**9)** [Q_ID:1515]. ಭಾರತದ ಪ್ರಥಮ ವರ್ತಮಾನ ಪತ್ರಿಕೆ :

a) ಕೇಸರಿ b) ಬಾಂಬೆ ಸಮಾಚಾರ c) ದಿ. ಬೆಂಗಾಲ್ ಗೆಜೆಟ್ d) ಅಮೃತ್ ಬಜಾರ್ ಪತ್ರಿಕೆ

**10)** [Q_ID:1517]. ಕರ್ನಾಟಕ ಗತ ವೈಭವದಲ್ಲಿ ಬ್ರಿಟಿಷರ ವಿರುದ್ಧ ಲೇಖನಗಳನ್ನು ರಚಿಸಿದವರು :

a) ಹನುಮಂತ ರಾವ್ ಮೊಹರೆ b) ಪಂಡಿತ್ ತಾರಾನಾಥ್ c) ಕೋಲಾಚಲ ವೆಂಕಟ ರಾವ್ d) ಮಂಜಪ್ಪ ಹರ್ಡೀಕರ್

**11)** [Q_ID:1523]. ಚಳಿಗಾಲವು ಡಿಸೆಂಬರ್ ನಿಂದ ...... ವರೆವಿಗೆ **:**

a) ಮಾರ್ಚ್ b) ಫೆಬ್ರವರಿ c) ಏಪ್ರಿಲ್ d) ಜನವರಿ

**12)** [Q_ID:2174]. ಹೈದರಾಬಾದಿನ ನಿಜಾಮನು ಯಾವ ನೀತಿಗೆ ಒಳಪಟ್ಟ ಮೊದಲ ದೇಶೀಯ ದೊರೆ **:**

a) ಕಾರ್ಯ ನೇಮಕಾತಿ ನೀತಿ b) ಮುಕ್ತ ವ್ಯಾಪಾರ ನೀತಿ c) ಸಹಾಯಕ ಸೈನ್ಯ ಪದ್ಧತಿ ನೀತಿ d) ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ

**13)** [Q_ID:2195]. ಭಾರತದಲ್ಲಿ ಯಾವ ನೀರಾವರಿ ಪದ್ಧತಿ ಪ್ರಧಾನವಾಗಿ ಪ್ರಚಲಿತವಾಗಿದೆ **:**

a) ಬಾವಿ ನೀರಾವರಿ b) ಕೆರೆ ನೀರಾವರಿ c) ಕಾಲುವೆ ನೀರಾವರಿ d) ಹನಿ ನೀರಾವರಿ

**14)** [Q_ID:2198]. ಸರ್ಕಾರವು ರೈತರನ್ನು ಪ್ರಕೃತಿಯ ವಿಕೋಪಗಳಿಂದ ರಕ್ಷಿಸಲು ಯಾವ ಕ್ರಮವನ್ನು ಕೈಗೊಂಡಿದೆ? **:**

a) ಭಾರತದ ಅಹಾರ ನಿಗಮದ ಸ್ಥಾಪನೆ b) ಸಹಕಾರಿ ಸಂಘಗಳ ಸ್ಥಾಪನೆ c) ಬೆಳೆ ವಿಮೆ d) ಜನತಾ ಬಜಾರ್ ಗಳ ಸ್ಥಾಪನೆ

**15)** [Q_ID:2204]. ಸಂಗೊಳ್ಳಿ ರಾಯಣ್ಣ ಇಂಗ್ಲಿಷರ ವಿರುದ್ಧ ಹೋರಾಡಲು ಕಾರಣವೇನೆಂದರೆ ಅವನು **:**

a) ಕಿತ್ತೂರಿನ ಅರಸನಾಗಲು b) ಇಂಗ್ಲೀಷರನ್ನು ಶಿಕ್ಷಿಸಲು c) ಕಿತ್ತೂರನ್ನು ಮರಳಿ ಗೆಲ್ಲಲು d) ರಾಣಿ ಚೆನ್ನಮ್ಮಳ ದತ್ತಕ ಪುತ್ರನನ್ನು ಅರಸನನ್ನಾಗಿ ಮಾಡಲು

**2. ಬಿಟ್ಟ ಸ್ಥಳ ತುಂಬಿಸು./ Fill in the blanks.** 5X1

**16)** [Q_ID:224]. ಗಂಗಾ ನದಿ ಮುಖಜ ಭೂಮಿಯಲ್ಲಿ ಕಂಡುಬರುವ ಮ್ಯಾಂಗ್ರೂವ್ ಕಾಡುಗಳನ್ನು-----ಎನ್ನುತ್ತಾರೆ.

**17)** [Q_ID:818]. ಅಲ್ಫಾನ್ಸೋ-ಡಿ-ಅಲ್ಬುಕರ್ಕನು ಬಿಜಾಪುರದ ಸುಲ್ತಾನನಿಂದ ವಶಪಡಿಸಿಕೊಂಡ ಪ್ರದೇಶ .....

**18)** [Q_ID:819]. ಗ್ರಾಮೀಣ ಮಹಿಳಯರನ್ನು ಅಭಿವೃದ್ಧಿಪಡಿಸಲು ರೂಪಿಸಿರುವ ಯೋಜನೆ .....

**19)** [Q_ID:821]. ಭಾರತದಲ್ಲಿಯೇ ಅತ್ಯುನ್ನತವಾದ ಶಿಖರ ..........

**20)** [Q_ID:1289]. ಪ್ಯಾಲೆಸ್ಟೇನಿಯನ್ ಮುಕ್ತಿ ಸೇನೆಯ ನಾಯಕರಾಗಿದ್ದವರು--

**3. ಜೋಡಿಸಿ ಬರೆಯಿರಿ./ Match the following.** 1X5

**21)** [Q_ID:817].

| (A) | (B) |
|---|---|
| a) ವಾಸ್ಕೊ - ಡಿ - ಗಾಮ | 1) ಮಾರ್ಟಿನ್ ಲೂಥರ್ |
| b) ವರ್ಣಭೇದ | 2) 1965 |
| c) ಕಳ್ಳಸಾಗಾಣಿಕೆ | 3) ಕರಾವಳಿ |
| d) ಪಶ್ಚಿಮ ಕರಾವಳಿ ತೀರ | 4) ಕಾಫಿಪೊಸ |
| e) ಕೇಂದ್ರೀಯ ಆಹಾರ ನಿಗಮ | 5) 1498 |
| f) | 6) ಗ್ರಾಹಕ ನ್ಯಾಯಾಲಯ |

| | |
|---|---|
| g) | 7) ಕೊಂಕಣ |
| h) | 8) ನೆಲ್ಸನ್ ಮಂಡೇಲಾ |

**4. ಒಂದು ವಾಕ್ಯದಲ್ಲಿ ಉತ್ತರಿಸಿ./ Answer the following in one sentence.** 9X1

**22)** [Q_ID:231]. ಯುನಿಸೆಫ್ (UNICEF) ಗ್ರೀಟಿಂಗ್ ಕಾರ್ಡುಗಳನ್ನೇ ನಾವೆಲ್ಲರೂ ಆದಷ್ಟು ಕೊಳ್ಳಬೇಕು. ಏಕೆ?

**23)** [Q_ID:232]. ಇತ್ತೀಚಿನ ದಿನಗಳಲ್ಲಿ ಸಾರ್ಕ್ ಸಂಸ್ಥೆಯ ಹಿನ್ನಡೆಗೆ ಕಾರಣವೇನು?

**24)** [Q_ID:234]. ವನಮಹೋತ್ಸವದ ಮುಖ್ಯ ಉದ್ದೇಶವೇನು?

**25)** [Q_ID:650]. ಭಾರತದ ಥಿಯೋಸಫಿಕಲ್ ಸೊಸೈಟಿಯನ್ನು ಸ್ಥಾಪಿಸಿದವರು ಯಾರು?

**26)** [Q_ID:652]. ಅಮೇರಿಕಾದ ಗಾಂಧಿ ಎಂದು ಪ್ರಸಿದ್ದರಾಗಿರುವವರು ಯಾರು?

**27)** [Q_ID:828]. ಮಾನವ ಹಕ್ಕು ಎಂದರೇನು?

**28)** [Q_ID:829]. ಮರಳುಗಾಡಿನ ಸಸ್ಯವರ್ಗವನ್ನು ಹೆಸರಿಸಿ.

**29)** [Q_ID:879]. ಮಲೆನಾಡು ಪ್ರಾಂತ್ಯದಲ್ಲಿ ಬ್ರಿಟಿಷರ ವಿರುದ್ಧ ಬಂಡಾಯವೆದ್ದ ನಾಯಕನಾರು?

**30)** [Q_ID:1298]. ಹಾಲ್ದಿಯಾ ಬಂದರನ್ನು ಏಕೆ ಸ್ಥಾಪಿಸಲಾಯಿತು?

**5. ಎರಡು ವಾಕ್ಯಗಳಲ್ಲಿ ಉತ್ತರಿಸಿ./ Answer the following in two sentences.** 16X2

**31)** [Q_ID:247]. ಆಹಾರ ಮತ್ತು ಕೃಷಿ ಸಂಸ್ಥೆಯ (FAO) ಕಾರ್ಯಗಳೇನು?

**32)** [Q_ID:252]. ಗ್ರಾಮೀಣ ಪ್ರದೇಶಗಳಿಗೆ ಗೃಹ ಕೈಗಾರಿಕೆಗಳು ಏಕೆ ಸೂಕ್ತವಾಗಿವೆ?

**33)** [Q_ID:253]. ಆರನೇ ಪಂಚವಾರ್ಷಿಕ ಯೋಜನೆಯು ಸಾಮಾಜಿಕ ನ್ಯಾಯವನ್ನು ಹೇಗೆ ಒದಗಿಸಿತು?

**34)** [Q_ID:662]. ರಾಷ್ಟ್ರಗಳ ಸಂಘ ತನ್ನ ನಿರ್ಧಾರಗಳನ್ನು ಎಲ್ಲಾ ರಾಷ್ಟ್ರಗಳ ಮೇಲೆ ಹೇರಲಾಗಲಿಲ್ಲ ಏಕೆ?

**35)** [Q_ID:671]. ಸಿಮೆಂಟಿನ ಬಳಕೆ ದೇಶದ ಅಭಿವೃದ್ದಿಯ ಪ್ರತೀಕ ಹೇಗೆ?

**36)** [Q_ID:836]. ಸರದಾರ್ ವಲ್ಲಭಾಯ್ ಪಟೇಲ್ ಹೈದರಾಬಾದಿನ ಮೇಲೆ ಪೋಲೀಸ್ ಕಾರ್ಯಾಚರಣೆ ಕೈಗೊಳ್ಳಲು ಕಾರಣವೇನು?

**37)** [Q_ID:841]. ಸಾರ್ಕ್ ರಾಷ್ಟ್ರಗಳನ್ನು ಹೆಸರಿಸಿ. ಇದು ಯಾವಾಗ ಅಸ್ಥಿತ್ವಕ್ಕೆ ಬಂದಿತು?

**38)** [Q_ID:890]. ಶಿವಪುರ ಧ್ವಜ ಸತ್ಯಾಗ್ರಹದ ಉದ್ದೇಶವೇನು?

**39)** [Q_ID:896]. ಆಫ್ರಿಕನ್ ಒಕ್ಕೂಟದ ಉದ್ದೇಶವೇನು?

**40)** [Q_ID:900]. ರಸ್ತೆಗಳ ನಿರ್ಮಾಣದ ಪ್ರಾಮುಖ್ಯತೆ ಏನು?

**41)** [Q_ID:902]. ಮೂರನೇ ಪಂಚವಾರ್ಷಿಕ ಯೋಜನೆ ವಿಫಲವಾಗಲು ಕಾರಣವೇನು?

**42)** [Q_ID:1544]. ದೊಡ್ಡ ದೇವರಾಜರ ಸಾಧನೆಗಳನ್ನು ತಿಳಿಸಿ.

**43)** [Q_ID:1545]. ದಿವಾನ್ ರಂಗಾಚಾರ್ಲು ರವರ ಸಾಧನೆ ಬರೆಯಿರಿ.

**44)** [Q_ID:1555]. ಭಾರತದಲ್ಲಿ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ದೊರೆಯುವ ಸ್ಥಳಗಳಾವುವು?

**45)** [Q_ID:2217]. ಉತ್ಪಾದಕ ಕೈಗಾರಿಕೆಗಳು ಎಂದರೇನು? ಅವುಗಳ ಪ್ರಮುಖ ವಿಭಾಗಗಳಾವುವು?

**46)** [Q_ID:2219]. ಸರ್ ಎಂ.ವಿಶ್ವೇಶ್ವರಯ್ಯನವರ ಅಭಿವೃದ್ಧಿಯಲ್ಲಿ ಕಾರ್ಯಗಳಲ್ಲಿ ಯಾವುದಾದರೂ ಎರಡನ್ನು ನಮೂದಿಸಿ.

**6. ಮೂರು ವಾಕ್ಯಗಳಲ್ಲಿ ಉತ್ತರಿಸಿ./ Answer the following in three sentences.** 6X3

**47)** [Q_ID:257]. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ವಿಫಲತೆಗೆ ಕಾರಣಗಳೇನು?

**48)** [Q_ID:259]. ಮಾನ್ ಸೂನ್ ದೇಶಗಳು ಭತ್ತದ ಬೆಳೆಗೆ ಪೂರಕವಾಗಿದೆ. ಹೇಗೆ?

**49)** [Q_ID:850]. ಮಹಿಳೆಯರ ಹಿತಾಸಕ್ತಿ ಹಾಗು ವಿಕಾಸಕ್ಕೆ ಸರಕಾರ ಕೈಗೊಂಡ ಕ್ರಮಗಳೇನು?

**50)** [Q_ID:906]. ಕಾಫಿ ಮತ್ತು ಟೀ ಬೆಳೆಯಲು ಬೇಕಾಗುವ ಭೌಗೋಳಿಕ ಅಂಶಗಳನ್ನು ತಿಳಿಸಿ.

**51)** [Q_ID:2220]. 1857 ರ ದಂಗೆಯ ವಿಫಲಕ್ಕೆ ಯಾವುದಾದರೂ ಮೂರು ಕಾರಣಗಳನ್ನು ಪಟ್ಟಿ ಮಾಡಿ

**52)** [Q_ID:2221]. ವಿಶ್ವಸಂಸ್ಥೆಯ ಗುರಿಗಳೇನು?

**7. ಎಂಟು ವಾಕ್ಯಗಳಲ್ಲಿ ಉತ್ತರಿಸಿ./ Answer the following in eight sentences.** 3X4

**53)** [Q_ID:856]. ಭಾರತದಲ್ಲಿ ವ್ಯವಸಾಯದ ಪ್ರಾಮುಖ್ಯತೆಯೇನು?

**54)** [Q_ID:1324]. ಭಾರತದಲ್ಲಿ ವ್ಯವಸಾಯಾಭಿವೃದ್ಧಿಗೆ ಕೈಗೊಂಡ ನೀರಾವರಿ ಯೋಜನೆಗಳೇನು?

**55)** [Q_ID:2225]. ಬಡತನ ಎಂದರೇನು? ಅದರ ನಿವಾರಣೆಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

**8. ಭಾರತದ ಭೂಪಟ ಬರೆದು ಕೇಳಿದ್ದನ್ನು ಗುರುತಿಸಿ./ Draw map of India and identify places.** 1X4

**56)** [Q_ID:2227]. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಕೇಳಿರುವುದನ್ನು ಗುರುತಿಸಿ:ಕೊಲ್ಕತಾ,ಕಾವೇರಿ ನದಿ, 82 1/2 ಪೂರ್ವ ರೇಖಾಂಶ

****ಪ್ರಶ್ನೆ ಪತ್ರಿಕೆ ಮುಗಿದಿದೆ****

**ತರಗತಿ** :10 **ವಿಷಯ** :ಸಮಾಜ ಶಾಸ್ತ್ರ / Social Science **ವಿಧ** :

**ದಿನಾಂಕ** :05/12/2012 ಅಂಕಗಳು/Max Marks:100

**1. ಸರಿಯಾದ ಉತ್ತರವನ್ನು ಆರಿಸಿ./ Choose right answers.** 15X1

**1)** [Q_ID:213]. (a) ಅಮೆರಿಕಾ ಅಲಿಪ್ತತೆಯನ್ನು ಅನುಸರಿಸುತ್ತಿತ್ತು

**2)** [Q_ID:634]. (c) ಜಪಾನ್ ಯಾವುದೇ ಶರತ್ತುಗಳಿಲ್ಲದೆ ಶರಣಾಗುತ್ತಿರಲಿಲ್ಲ

**3)** [Q_ID:635]. (d) ಶೈಕ್ಷಣಿಕ ಹಕ್ಕು

**4)** [Q_ID:639]. (c) ಆಲ

**5)** [Q_ID:642]. (a) ಸಂಘಟನಾತ್ಮಕ ನೆರವು ನೀಡಲು

**6)** [Q_ID:858]. (a) 1853ರ ಶಾಸನ

**7)** [Q_ID:871]. (a) ಗುಡಿ ಕೈಗಾರಿಕೆ

**8)** [Q_ID:1283]. (d) ಛತ್ತೀಸ್ ಘಡ

**9)** [Q_ID:1515]. (c) ದಿ. ಬೆಂಗಾಲ್ ಗೆಜೆಟ್

**10)** [Q_ID:1517]. (a) ಹನುಮಂತ ರಾವ್ ಮೊಹರೆ

**11)** [Q_ID:1523]. (b) ಫೆಬ್ರವರಿ

**12)** [Q_ID:2174]. (c) ಸಹಾಯಕ ಸೈನ್ಯ ಪದ್ಧತಿ ನೀತಿ

**13)** [Q_ID:2195]. (a) ಬಾವಿ ನೀರಾವರಿ

**14)** [Q_ID:2198]. (c) ಬೆಳೆ ವಿಮೆ

**15)** [Q_ID:2204]. (d) ರಾಣಿ ಚೆನ್ನಮ್ಮಳ ದತ್ತಕ ಪುತ್ರನನ್ನು ಅರಸನನ್ನಾಗಿ ಮಾಡಲು

**2. ಬಿಟ್ಟ ಸ್ಥಳ ತುಂಬಿಸು./ Fill in the blanks.** 5X1

**16)** [Q_ID:224]. ಸುಂದರ್ ಬನ್

**17)** [Q_ID:818]. ಗೋವಾ

**18)** [Q_ID:819]. ಗ್ರಾಮಾಂತರ ಮಹಿಳಾ ಮತ್ತು ವಿಕಾಸ ಯೋಜನೆ

**19)** [Q_ID:821]. ಕೆ2-ಮೌಂಟ್ ಗಾಡ್ವಿನ್ ಆಸ್ಟಿನ್

**20)** [Q_ID:1289]. ಅರಾಫತ್

**3. ಜೋಡಿಸಿ ಬರೆಯಿರಿ./ Match the following.** 1X5

**21)** [Q_ID:817].

| (A) | (B) |
|---|---|
| a) ವಾಸ್ಕೊ - ಡಿ - ಗಾಮ | 5) 1498 |

| | |
|---|---|
| b) ವರ್ಣಭೇದ | 8) ನೆಲ್ಸನ್ ಮಂಡೇಲಾ |
| c) ಕಳ್ಳಸಾಗಾಣಿಕೆ | 4) ಕಾಫಿಪೊಸ |
| d) ಪಶ್ಚಿಮ ಕರಾವಳಿ ತೀರ | 7) ಕೊಂಕಣ |
| e) ಕೇಂದ್ರೀಯ ಆಹಾರ ನಿಗಮ | 2) 1965 |

**4. ಒಂದು ವಾಕ್ಯದಲ್ಲಿ ಉತ್ತರಿಸಿ./ Answer the following in one sentence.** 9X1

**22)** [Q_ID:231]. ಕಾರ್ಡಿನ ಮಾರಾಟದಿಂದ ಬರುವ ಹಣವನ್ನು ಮಕ್ಕಳ ಕಲ್ಯಾಣಕ್ಕೆ ಉಪಯೋಗಿಸಲಾಗುತ್ತದೆ

**23)** [Q_ID:232]. ಭಾರತ – ಪಾಕಿಸ್ತಾನಗಳ ಭಿನ್ನಾಭಿಪ್ರಾಯ

**24)** [Q_ID:234]. ಸಾವಿರಾರು ಸಸಿಗಳನ್ನು ನೆಡುವುದು

**25)** [Q_ID:650]. ಬ್ಲಾವಟ್ಸ್ಕಿ ಮತ್ತು ಕರ್ನಲ್ ಆಲ್ಕಾಟ್

**26)** [Q_ID:652]. ಮಾರ್ಟಿನ್ ಲೂಥರ್ ಕಿಂಗ್

**27)** [Q_ID:828]. ಮಾನವನ ಜೀವನದ ವಿಕಾಸಕ್ಕೆ ಅವಕಾಶ ಮಾಡಿಕೊಡುವ ಆಸ್ಪದಗಳಿಗೆ ಮಾನವ ಹಕ್ಕು ಎನ್ನುವರು.

**28)** [Q_ID:829]. ಮರಳುಗಾಡಿನ ಸಸ್ಯವರ್ಗದಲ್ಲಿ ಬೆಳೆಯುವ ಮರಗಳು: ಬಬೂಲ್, ತಾಳೆ,ಈಚಲು ಮತ್ತು ಕಳ್ಳಿ ಗಿಡಗಳು

**29)** [Q_ID:879]. ಮಲೆನಾಡು ಪ್ರಾಂತ್ಯದಲ್ಲಿ ಬ್ರಿಟಿಷರ ವಿರುದ್ಧ ಬಂಡಾಯವೆದ್ದ ನಾಯಕ ಧೋಂಡೀಯ ವಾಘ್

**30)** [Q_ID:1298]. ಕೊಲ್ಕತ್ತ ಬಂದರಿನ ಒತ್ತಡವನ್ನು ನಿವಾರಿಸಲು ಬಂಗಾಳಕೊಲ್ಲಿಯ ತೀರದಲ್ಲಿ ಪಶ್ಚಿಮ ಬಂಗಾಳದಲ್ಲಿ ಹಾಲ್ದಿಯಾ ಬಂದರನ್ನು ಸ್ಥಾಪಿಸಲಾಯಿತು

**5. ಎರಡು ವಾಕ್ಯಗಳಲ್ಲಿ ಉತ್ತರಿಸಿ./ Answer the following in two sentences.** 16X2

**31)** [Q_ID:247]. -ಆಹಾರ ಉತ್ಪನ್ನಕ್ಕೆ ಪ್ರೋತ್ಸಾಹ

-ಪೌಷ್ಟಿಕ ಆಹಾರ ಸೇವನೆಗೆ ಪ್ರೋತ್ಸಾಹ

-ಸ್ವಾಭಾವಿಕ ಸಂಪನ್ಮೂಲಗಳ ಸಂರಕ್ಷಣೆ

-ಗ್ರಾಮೀಣ ಪ್ರದೇಶದ ಜೀವನಮಟ್ಟ ಅಭಿವೃದ್ಧಿ

**32)** [Q_ID:252]. -ಪರ್ಯಾಯ ಉದ್ಯೋಗಾವಕಾಶ ಒದಗಿಸುತ್ತದೆ

-ಕೃಷಿ ಮೇಲಿನ ಜನಸಂಖ್ಯಾ ಒತ್ತಡ ಕಡಿಮೆ

-ಗ್ರಾಮಾಂತರ ಜನರಲ್ಲಿರುವ ಸುಪ್ತ ಕೌಶಲ್ಯಗಳನ್ನು ಬಳಸಿಕೊಳ್ಳುವ ಅವಕಾಶ

-ಸ್ವಾವಲಂಬನೆ

**33)** [Q_ID:253]. -ಪ್ರಾಥಮಿಕ ವಿದ್ಯಾಭ್ಯಾಸ

-ವಸತಿ ಸೌಕರ್ಯ

-ಹಳ್ಳಿಗಳಿಗೆ ಕುಡಿಯುವ ನೀರಿನ ಸೌಕರ್ಯ

-ಕೊಳಚೆ ಪ್ರದೇಶಗಳ ಸುಧಾರಣೆ

**34)** [Q_ID:662]. ಎಲ್ಲಾ ರಾಷ್ಟ್ರಗಳೂ ಸದಸ್ಯರಾಗಲಿಲ್ಲ. ತನ್ನದೇ ಆದ ಸೈನ್ಯ ಶಕ್ತಿ ಇರಲಿಲ್ಲ

**35)** [Q_ID:671]. ಅಭಿವೃದ್ಧಿ ಕಾರ್ಯಗಳಾದ ಅಣೆಕಟ್ಟೆ, ಕಟ್ಟಡ, ಸೇತುವೆ ನಿರ್ಮಾಣಕ್ಕೆ ಸಿಮೆಂಟು ಅವಶ್ಯ.

**36)** [Q_ID:836]. ಏಕೆಂದರೆ, ನಿಜಾಮರು ಭಾರತದೊಂದಿಗೆ ಯುದ್ಧಮಾಡಲು ಯುದ್ಧಸಾಮಗ್ರಿಗಳನ್ನು ಆಮದು ಮಾಡಿಕೊಳ್ಳುತ್ತಿದ್ದ ವಿಚಾರ ಭಾರತ ಸರಕಾರಕ್ಕೆ ತಿಳಿಯಿತು. ಈ ಅಪಾಯವನ್ನು ಮನಗೊಂಡು ಸರ್ದಾರ್ ವಲ್ಲಭಾಯ್ ಪಟೇಲರ ನಿರ್ಣಯದಂತೆ ಹೈದರಾಬಾದಿನ ಮೇಲೆ ಭಾರತದ ಸೇನೆ ದಾಳಿಮಾಡಿತು.

**37)** [Q_ID:841]. ಸಾರ್ಕ್ ರಾಷ್ಟ್ರಗಳು: ಭಾರತ, ಪಾಕಿಸ್ತಾನ, ಬಾಂಗ್ಲಾದೇಶ, ನೇಪಾಳ, ಮಾಲ್ಡೀವ್ಸ್, ಭೂತಾನ್. ಇದು 1985 ರಲ್ಲಿ ಅಸ್ತಿತ್ವಕ್ಕೆ ಬಂದಿತು

**38)** [Q_ID:890]. ಮೈಸೂರು ರಾಜ್ಯ ಕಾಂಗ್ರೆಸ್ ಜವಾಬ್ದಾರಿ ಸರಕಾರಕ್ಕಾಗಿ ಮದ್ದೂರಿನ ಸಮೀಪದ ಶಿವಪುರದಲ್ಲಿ ಕ್ರಿ.ಶ. 1938 ರಲ್ಲಿ ಧ್ವಜ ಸತ್ಯಾಗ್ರಹ ಕಾರ್ಯಕ್ರಮವನ್ನು ಹಮ್ಮಿಕೊಂಡಿತು.

**39)** [Q_ID:896]. ಆಫ್ರಿಕನ್ ಒಕ್ಕೂಟದ ಉದ್ದೇಶಗಳು: ಎ) ಆಫ್ರಿಕದಲ್ಲಿನ ವಸಾಹತುಗಳ ಸ್ವಾತಂತ್ರ್ಯ ಸಾಧನೆ ಹಾಗೂ ರಾಜಕೀಯ, ಸಾಮಾಜಿಕ,ಸಾಂಸ್ಕೃತಿಕ ಹಾಗೂ ಆರ್ಥಿಕ ನೀತಿಗಳ ಸಮನ್ವಯ ಸಾಧಿಸುವುದು. ಬಿ) ಅಲ್ಲದೆ ಸದಸ್ಯ ರಾಷ್ಟ್ರಗಳ ಸಾರ್ವತ್ರಿಕ ರಕ್ಷಣೆಗೆಂದೇ ಒಂದು ವ್ಯವಸ್ಥೆಯನ್ನು ರಚಿಸಬೇಕು ಎಂಬುದೂ ಇದರ ಉದ್ದೇಶವಾಗಿದೆ

**40)** [Q_ID:900]. ರಸ್ತೆಗಳ ನಿರ್ಮಾಣದ ಪ್ರಾಮುಖ್ಯತೆಗಳು: 1) ಭಾರತವು ಹಳ್ಳಿಗಳ ದೇಶ ಹಾಗೂ ಕೃಷಿಪ್ರಧಾನ ದೇಶ, ಹಳ್ಳಿಗಳ ಮತ್ತು ಕೃಷಿಯ ಅಭಿವೃದ್ಧಿಗೆ ಅವಶ್ಯಕವಾಗಿದೆ 2) ರೈತರು ಬೆಳೆದ ಉತ್ಪನ್ನಗಳನ್ನು ಮಾರುಕಟ್ಟೆಗೆ ಒಯ್ಯಲು ಸಹಾಯವಾಗಿದೆ. 3) ಹಳ್ಳಿಗಳಿಗೆ ಬೇಕಾದ ಆವಶ್ಯಕ ವಸ್ತುಗಳನ್ನು ಪೂರೈಸಿಕೊಳ್ಳಲು ರಸ್ತೆಗಳು ಸಹಾಯಮಾಡುತ್ತವೆ.4) ಕೈಗಾರಿಕೆಗಳ ಅಭಿವೃದ್ಧಿಗೂ ರಸ್ತೆಗಳ ಆವಶ್ಯಕತೆ ಇದೆ.

**41)** [Q_ID:902]. ಮೂರನೇ ಪಂಚವಾರ್ಷಿಕ ಯೋಜನೆ ವಿಫಲವಾಗಲು ಕಾರಣವೇನೆಂದರೆ 1) ಚೀನಾ(1962) ಮತ್ತು ಪಾಕಿಸ್ತಾನ(1965) ಗಳ ಆಕ್ರಮಣ 2) ಮಾನ್ಸೂನ್ ಮಳೆಗಳು ಸಕಾಲಕ್ಕೆ ಬಾರದೇ ಹೋದುದು. 3)ಜನರು ಕೃಷಿ ಅಭಿವೃದ್ಧಿಗಳಲ್ಲಿ ಸ್ವಲ್ಪಮಟ್ಟಿಗೆ ಅನಾಸಕ್ತಿಯನ್ನು ತೋರಿದರು

**42)** [Q_ID:1544]. ದೊಡ್ಡ ದೇವರಾಜರು ಕೆಳದಿ ಶಿವಪ್ಪ ನಾಯಕರ ದಾಳಿಯನ್ನು ಯಶಸ್ವಿಯಾಗಿ ಹಿಂದಕ್ಕೆ ಅಟ್ಟಿದರು. ಕುಣಿಗಲ್, ಚಿಕ್ಕನಾಯಕನ ಹಳ್ಳಿಯನ್ನು ತಮ್ಮ ರಾಜ್ಯಕ್ಕೆ ಸೇರಿಸಿಕೊಂಡರು. ಇವರು ಚಾಮುಂಡಿ ಬೆಟ್ಟಕ್ಕೆ ಮೆಟ್ಟಿಲು ಹಾಕಿಸಿ ಅಲ್ಲಿನ ನಂದಿ ವಿಗ್ರಹ ಸ್ಥಾಪಿಸಿದ್ದು ಇವರ ಸಾಧನೆಗಳು.

**43)** [Q_ID:1545]. ಇವರು 1881 ರಲ್ಲಿ ಪ್ರಜಾಪ್ರತಿನಿಧಿ ಸಭೆ ಸ್ಥಾಪಿಸಿದರು. ಇವರು 1882 ರಲ್ಲಿ ಬೆಂಗಳೂರು ಮೈಸೂರು ರೈಲ್ವೆಯನ್ನು ಆರಂಭಿಸಿದರು.

**44)** [Q_ID:1555]. ಭಾರತದಲ್ಲಿ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ದೊರೆಯುವ ಸ್ಥಳಗಳು: ಅಸ್ಸಾಂ,ಗುಜರಾತ್,ಮಹಾರಾಷ್ಟ್ರದ ಖಂಡಾವರಣ ಪ್ರದೇಶ

**45)** [Q_ID:2217]. ಕಚ್ಚಾ ವಸ್ತುಗಳನ್ನು ಸಿದ್ಧವಸ್ತುಗಳನ್ನಾಗಿ ಮಾರ್ಪಡಿಸುವ ಎಲ್ಲಾ ಕಾರ್ಯಗಳನ್ನು ಒಳಗೊಂಡ ಕೈಗಾರಿಕೆ

ವಿಭಾಗಗಳು:ಬೃಹತ್ ಕೈಗಾರಿಕೆಗಳು;ಸಣ್ಣ ಪ್ರಮಾಣದ ಕೈಗಾರಿಕೆಗಳು;

**46)** [Q_ID:2219]. ಭದ್ರಾವತಿ ಕಬ್ಬಿಣ ಕಾರ್ಖಾನೆಯ ಸ್ಥಾಪನೆ;ಬೆಂಗಳೂರಿನ ಸಾಬೂನು ಕಾರ್ಖಾನೆ ಸ್ಥಾಪನೆ;ಗಂಧದ ಎಣ್ಣೆ ಕಾರ್ಖಾನೆ ಸ್ಥಾಪನೆ;ಮೈಸೂರು ಬ್ಯಾಂಕ್ ಸ್ಥಾಪನೆ

ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ;ಮೈಸೂರಿನಲ್ಲಿ ಜಯಚಾಮರಾಜೇಂದ್ರ ತಾಂತ್ರಿಕ ಶಿಕ್ಷಣ ಸಂಸ್ಥೆ ಆರಂಭ;ಬೆಂಗಳೂರಿನಲ್ಲಿ ಇಂಜಿನಿಯರಿಂಗ್ ಕಾಲೇಜು ಸ್ಥಾಪನೆ

ಹೆಬ್ಬಾಳದಲ್ಲಿ ಕೃಷಿ ಕಾಲೆಜು ಸ್ಥಾಪನೆ

**6. ಮೂರು ವಾಕ್ಯಗಳಲ್ಲಿ ಉತ್ತರಿಸಿ./ Answer the following in three sentences.** 6X3

**47)** [Q_ID:257]. -ನಾಯಕತ್ವದ ಕೊರತೆ

-ಸೈನಿಕರು – ಲೂಟಿ

-ಆಧುನಿಕ ಶಸ್ತ್ರಾಸ್ತ್ರಗಳಿರಲಿಲ್ಲ

-ತಂತ್ರಜ್ಞಾನದ ಕೊರತೆ – ಟೆಲಿಗ್ರಾಫ್

-ಸಿಪಾಯಿಗಳಲ್ಲಿ ಸಂಘಟನೆಯ ಕೊರತೆ

-ಅವರಲ್ಲಿ ನಿಶ್ಚಿತ ಗುರಿ ಇತ್ತು, ನಮ್ಮಲ್ಲಿರಲಿಲ್ಲ

-ಹಲವರು ಆಂಗ್ಲರಿಗೆ ಸಹಕರಿಸಿದರು (ಯಾವುದಾದರು ಆರು ಅಂಶಗಳು)

**48)** [Q_ID:259]. -ವಾಯುಗುಣ ಸೂಕ್ತವಾಗಿದೆ

-ಸಮಶೀತೋಷ್ಣವಲಯದ ಮುಖ್ಯ ಬೆಳೆ ಭತ್ತ

-ಸರಾಸರಿ 25*C ಉಷ್ಣಾಂಶ ಅಗತ್ಯ

-ವಾರ್ಷಿಕ 100 ರಿಂದ 200 ಸೆಂ.ಮೀ. ಮಳೆ ಅವಶ್ಯ

-ಮಾನ್ ಸೂನ್ ನಿಂದಾಗಿ ಸಾಕಷ್ಟು ನೀರಿನ ಲಭ್ಯ

**49)** [Q_ID:850]. 1) 1969 ರಲ್ಲಿ ಅಲ್ಪಾವಧಿ ಆಶ್ರಯ ಸೌಕರ್ಯವನ್ನು ಕಲ್ಪಿಸಿದೆ 2) 1987 ರಲ್ಲಿ ತರಬೇತಿ ಹಾಗೂ ಉದ್ಯೋಗದ ಯೋಜನೆ ಜಾರಿಗೊಳಿಸಿದೆ 3) ಇಂದಿರಾ ಮಹಿಳಾ ಯೋಜನೆಯಲ್ಲಿ ಸ್ವಯಂ ಸಿದ್ಧ ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡಿತು 4) 1998 ರಲ್ಲಿ ಸ್ತ್ರೀ ಶಕ್ತಿ ಎಂಬ ಕಾರ್ಯಕ್ರಮವನ್ನು ರಚಿಸಿತು 5) ಬಾಲಿಕಾ ಸಮೃದ್ಧಿ ಯೊಜನೆ, ಲೈಂಗಿಕ ಹಿಂಸಾಚಾರದಿಂದ ರಕ್ಷಿಸಿ, ರಾಷ್ಟ್ರೀಯ ಮಹಿಳಾ ವಿಮೋಚನೆ ಮುಂತಾದ ಕಾರ್ಯಕ್ರಮ ಕೈಗೊಂಡಿದೆ 6.2001 ನೆಯ ವರ್ಷವನ್ನು ಮಹಿಳಾ ಸಬಲೀಕರಣ ವರ್ಷವೆಂದೇ ಸಾರಿದೆ

**50)** [Q_ID:906]. ಕಾಫಿ: ಕಾಫಿಗೆ 150 ರಿಂದ 200 ಸೆ.ಮೀ ವಾರ್ಷಿಕ ಮಳೆ ಆವಶ್ಯಕ ಮತ್ತು ಮರದ ನೆರಳು ಆವಶ್ಯಕ.

ಚಹಾ: ಚಹ ಬೆಳೆಗೆ 200 ರಿಂದ 250 ಸೆ.ಮೀ ವಾರ್ಷಿಕ ಮಳೆ ಆವಶ್ಯಕ ಮತ್ತು ಮರದ ನೆರಳಿನ ಅವಶ್ಯಕತೆ ಇಲ್ಲ. ಎರಡಕ್ಕೂ ನೀರು ಚೆನ್ನಾಗಿ ಹರುದುಹೋಗುವ ಇಳಿಜಾರು ಪ್ರದೇಶ ಮತ್ತು ಸಾವಯವ ಪದಾರ್ಥಗಳಿಂದ ಕೂಡಿದ ಫಲವತ್ತಾದ ಮಣ್ಣು ಅವಶ್ಯಕ.

**51)** [Q_ID:2220]. ಲೂಟಿ, ದರೋಡೆಗಳಿಂದಾಗಿ ಸಿಪಾಯಿಗಳು ಜನಸಾಮಾನ್ಯರ ವಿಶ್ವಾಸ ಕಳೆದುಕೊಂಡಿದ್ದು,ಸುಧಾರಿತ ಶಸ್ತ್ರಾಸ್ತ್ರಗಳ ಕೊರತೆಯಿತ್ತು.ಟೆಲಿಗ್ರಾಫ್ ವ್ಯವಸ್ಥೆಯನ್ನು ಬಳಸಿಕೊಳ್ಳುವುದು ನಮ್ಮ ಸೈನಿಕರಿಗೆ ತಿಳಿದಿರಲಿಲ್ಲ.ದೇಶೀಯ ಅರಸರು ಇಂಗ್ಲಿಷರಿಗೆ ಬೆಂಬಲಿಸಿದರು.ಸಂಘಟನೆಯ ಕೊರತೆಯಿತ್ತು.ಸಿಪಾಯಿಗಳಲ್ಲಿ ಒಂದು ನಿಶ್ಚಿತ ಗುರಿಯಿರಲಿಲ್ಲ.

**52)** [Q_ID:2221]. ಅಂತರಾಷ್ಟ್ರೀಯ ಶಾಂತಿ ಭದ್ರತೆಯನ್ನು ಕಾಪಾಡುವುದು.ಸಮಾನತೆಯ ಅಧಾರದ ಮೇಲೆ ದೇಶಗಳ ನಡುವೆ ಸ್ನೇಹ ಸಂಬಂಧ ಬೆಳೆಸುವಿಕೆ.ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಮಾನವೀಯ ಸಮಸ್ಯೆಗಳ ಪರಿಹಾರಕ್ಕೆ ಸಹಕಾರ ಪಡೆಯುವುದು.ಮಾನವನ ಮೂಲಭೂತ ಹಕ್ಕುಗಳನ್ನು ಉತ್ತೇಜಿಸುವುದು.

**7. ಎಂಟು ವಾಕ್ಯಗಳಲ್ಲಿ ಉತ್ತರಿಸಿ./ Answer the following in eight sentences.** 3X4

**53)** [Q_ID:856]. ಜನರ ಮುಖ್ಯ ಜೀವನಾಧಾರವಾಗಿದೆ

ವ್ಯವಸಾಯವು ನಮ್ಮ ರಾಷ್ಟ್ರೀಯ ವರಮಾನದ ಮೂಲ ಆಧಾರವಾಗಿದೆ

ಜನರು ಮತ್ತು ಪ್ರಾಣಿಗಳ ಆಹಾರಕ್ಕೆ ಮುಖ್ಯ ಆಧಾರವಾಗಿದೆ

ಕೈಗಾರಿಕೆಗಳಿಗೆ ಕಚ್ಚಾವಸ್ತುವನ್ನು ಪೂರೈಸುತ್ತದೆ

ದೇಶದ ಆಂತರಿಕ ವ್ಯಾಪಾರಕ್ಕೆ ಸಹಾಯಕವಾಗಿದೆ

ವಿದೇಶೀ ವಿನಿಮಯ ಗಳಿಕೆ

ಬಂಡವಾಳದ ಕೊರತೆಯ ನಿವಾರಣೆ

ತೃತೀಯ ರಂಗದ ಬೆಳೆವಣಿಗೆಗೆ ಪೂರಕವಾಗಿದೆ

ರಾಷ್ಟ್ರೀಯ ಬಂಡವಾಳ ಶೇಖರಣೆಯಲ್ಲಿ ಮುಖ್ಯಪಾತ್ರ

ದೇಶದ ವರಮಾನವನ್ನು ಯೋಗ್ಯ ರೀತಿಯಲ್ಲಿ ಹಂಚಿಕೆಯಾಗಲು ಸಹಾಯ ಮಾಡುತ್ತದೆ

**54)** [Q_ID:1324]. 1)ಪಂಚವಾರ್ಷಿಕ ಯೋಜನೆಗಳಡಿಯಲ್ಲಿ ಅನೇಕ ನದಿಗಳಿಗೆ ಆಣೆಕಟ್ಟನ್ನು ಕಟ್ಟಿ ಬೇಸಾಯದ ಭೂಮಿಗೆ ನೀರಾವರಿಯನ್ನು ಒದಗಿಸಲಾಗುತ್ತದೆ. ಉದಾ: ದಾಮೋದರ ನದಿ ಕಣಿವೆ ಯೋಜನೆ. ಭಾಕ್ರಾನಂಗಲ್ ಯೋಜನೆ, ಕೋಸಿ ಯೋಜನೆ, ಹಿರಾಕುಡ್ ಯೋಜನೆ ಇತ್ಯಾದಿ.2)ಕೆರೆಗಳಲ್ಲಿನ ಹೂಳು ತೆಗೆಯುವ ಕಾರ್ಯಕ್ರಮಗಳನ್ನು ಕ್ರಮಬದ್ಧವಾಗಿ ನಡೆಸಲಾಗುತ್ತದೆ

3)ಸರಕಾರವು ರೈತರಿಗೆ ಸಾಲವನ್ನು ನೀಡಿ ಬಾವಿ ನೀರಾವರಿಯನ್ನು ಅಭಿವೃದ್ಧಿ ಪಡಿಸುತ್ತಿದೆ 4)ಗಂಗಾ, ಕಾವೇರಿ ನದಿ ಜೋಡಣೆಯಂತಹ ಭಾರೀ ಯೋಜನೆಗಳನ್ನು ಚರ್ಚಿಸಲಾಗುತ್ತಿದೆ.


**55)** [Q_ID:2225]. ಬಡತನ: ಒಬ್ಬ ವ್ಯಕ್ತಿ ತನ್ನ ಕುಟುಂಬದ ಪೋಷಣೆಗಾಗಿ ಮೂಲಭೂತ ಅವಶ್ಯಕತೆಗಳನ್ನು ಒದಗಿಸಲಾರದ ಸ್ಥಿತಿ.

ಬಡತನ ನಿವಾರಿಸುವ ಕ್ರಮಗಳು:

1)ರಾಷ್ಟ್ರೀಯ ಗ್ರಾಮೀಣ ಉದ್ಯೋಗ ತರಬೇತಿ 2)ರಾಷ್ಟ್ರೀಯ ಗ್ರಾಮಾಂತರ ಉದ್ಯೋಗ ನೀಡುವ ಯೋಜನೆ 3)ಗ್ರಾಮಾಂತರ ಮಹಿಳಾ ಮತ್ತು ಮಕ್ಕಳ ವಿಕಾಸ ಯೋಜನೆ 4)ಭೂರಹಿತರಿಗೆ ಉದ್ಯೋಗ ನೀಡುವ ಯೋಜನೆ5)ಜವಹರ್ ರೋಜ್ ಗಾರ್ ಯೋಜನೆ6)ಪ್ರಧಾನಮಂತ್ರಿಗಳ ಗ್ರಾಮೀಣ ಸಡಕ್ ಯೋಜನೆ

**8. ಭಾರತದ ಭೂಪಟ ಬರೆದು ಕೇಳಿದ್ದನ್ನು ಗುರುತಿಸಿ./ Draw map of India and identify places.** 1X4

**56)**[Q_ID:2227]




**** ಉತ್ತರ ಪತ್ರಿಕೆ ಮುಗಿದಿದೆ****